ಮಾರ್ಚ್ ಒಳಗೆ ಎಲ್ಲಾ ಉಪಕರಣಗಳನ್ನು ಒದಗಿಸುವುದು ಮಾತ್ರವಲ್ಲ ಡಾಕ್ಟರ್‌ನ್ನು ಸಹಾ ಅಲ್ಲಿಗೆ ನೇಮಕ ಮಾಡುತ್ತೇವೆ.

ಇಡಗೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ

1493: ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಿ.ಎಸ್.ಪುರ ಹೋಬಳಿ ಕೇಂದ್ರವನ್ನು (ಗುಬ್ಬಿ ತಾಲ್ಲೂಕು) ಇಡಗೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ತೆರೆಯಲು ಅಲ್ಲಿನ ಗ್ರಾಮಸ್ಥರು ಅಥವಾ ಅಕ್ಕಪಕ್ಕದ ಗ್ರಾಮದವರಿಂದ ಮನವಿಗಳೇನಾದರೂ ಬಂದಿದೆಯೇ ?

ಆ) ಇಡಗೂರು ಗ್ರಾಮದ ಸುತ್ತಲೂ ನೂರಾರು ಗ್ರಾಮಗಳಿದ್ದು ಸುಮಾರು 10–15 ಕಿ.ಮೀ. ವಿಸ್ತೀರ್ಣದಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರ ಇಲ್ಲದೆ ನೂರಾರು ಗ್ರಾಮಸ್ಥರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು;

ಈ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು ? ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಇಡಗೂರು ಗ್ರಾಮದಲ್ಲಿ ಎಂದು ತೆರೆಯಲಾಗುವುದು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):–

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ:– ಮಾನ್ಯ ಅಧ್ಯಕ್ಷರೆ, "ಉದ್ಭವಿಸುವುದಿಲ್ಲ" ಎಂದು ಮಾಮೂಲಿಯಾಗಿ ಉತ್ತರ ಬರುತ್ತಲೇ ಇದೆ. ನಾನು ಪ್ರಶ್ನೆ ಕೇಳಿದ್ದು ಸಿ.ಎಸ್. ಪುರ ಹೋಬಳಿ, ಗುಬ್ಬಿ ತಾಲ್ಲೂಕು ಇಡಗೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ತೆರೆಯಲು ಅಲ್ಲಿನ ಗ್ರಾಮಸ್ಥರಿಂದ ಅಥವಾ ಅಕ್ಕಪಕ್ಕದ ಗ್ರಾಮಸ್ಥರಿಂದ ಮನವಿಗಳೇನಾದರೂ ಬಂದಿವೆಯೇ ಎಂದು. "ಇಲ್ಲ" ಎಂದು ಉತ್ತರದಲ್ಲಿ ಹೇಳುತ್ತಾರೆ. ಮತ್ತೆ ಎರಡನೇ ಪ್ರಶ್ನೆ ಇಡಗೂರು ಗ್ರಾಮ ಸುಮಾರು 10-15 ಕಿಲೋಮೀಟರ್ ಸುತ್ತಮುತ್ತ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರ ಇಲ್ಲದೆ ನೂರಾರು ಜನ ಗ್ರಾಮಸ್ಥರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ "ಇಲ್ಲ" ಎಂದಿದ್ದೀರಿ. ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ? ಅಂದರೆ "ಉದ್ಭವಿಸುವುದಿಲ್ಲ" ಎಂದಿದ್ದೀರಿ. ಹಾಗಿದ್ದಲ್ಲಿ ಕಾರಣಗಳೇನು ? ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಇಡಗೂರು ಗ್ರಾಮದಲ್ಲಿ ಎಂದು ತೆರೆಯಲಾಗುವುದು ? ಎಂದು ಕೇಳಿದ್ದಕ್ಕೂ "ಉದ್ಭವಿಸುವುದಿಲ್ಲ" ಎಂದು ಹೇಳಿದ್ದೀರಿ. 1990ನೇ ಇಸವಿಯಲ್ಲಿ ನಾನು ತಮ್ಮ ಮೂಲಕ ಸಿ.ಎಸ್. ಪುರ ಗ್ರಾಮಸ್ಥರು ಹಾಗೂ ಇಡಗೂರು ಗ್ರಾಮಸ್ಥರು ಮತ್ತು ಅಜುಬಾಜು ಗ್ರಾಮಸ್ಥರು ಕೊಟ್ಟಿದ್ದ ಒಂದು ಅರ್ಜಿಯನ್ನು ತಮ್ಮ ಮೂಲಕ ಸಲ್ಲಿಸಿದ್ದೇನೆ. ಇದು 9ನೇ ಜುಲೈ 1990ರಲ್ಲಿ. ಇದು ನನ್ನ 41ನೇ ಪ್ರಶ್ನೆಯಾಗಿದೆ. ಮತ್ತೆ

ಅದೇ ವರ್ಷ ನಾನು ಪ್ರಶ್ನೆಯನ್ನು ಕೂಡ ಕಳುಹಿಸಿದ್ದೆ ಇದೇ ವಿಷಯದಲ್ಲಿ. ಹೀಗೆ ಇದ್ದರೂ ಕೂಡಾ ಗಮನಕ್ಕೆ ಬಂದಿಲ್ಲ, ಉದ್ಭವಿಸುವುದಿಲ್ಲ ಎಂದರೆ ಏನು ಸ್ವಾಮಿ ಅರ್ಥ ? ನಾವು ಹೇಗೆ ಕೆಲಸ ಮಾಡುವುದು ಸ್ವಾಮಿ ? ಹಿಂದಿನ ನಡವಳಿಕೆ ಏನಾಗಿದೆ ಎಂಬುದನ್ನು ನೋಡದೆ ಉತ್ತರ ಹೀಗೆ ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಮತ್ತು ಈ ಊರಿನ ಪರಿಸ್ಥಿತಿ ಏನಾಗಿದೆ ಎಂದರೆ, ಇದು ನನ್ನ ಕ್ಷೇತ್ರದ ಕೊನೆಯಲ್ಲಿದ್ದು ವೈ.ಕೆ. ರಾಮಯ್ಯನವರ ಕ್ಷೇತ್ರಕ್ಕೆ ಹತ್ತಿರದಲ್ಲಿ ಬರುತ್ತದೆ. ಕುಣಿಗಲ್‌ಗೆ ಹೋಗಬೇಕಾದರೆ 20 ಕಿಲೋಮೀಟರ್, ಸಿಎಸ್.ಪುರಕ್ಕೆ ಬರಬೇಕಾದರೆ 15 ಕಿಲೋಮೀಟರ್ ಆಗುತ್ತದೆ. ಹೀಗಿರುವುದರಿಂದ ಅಲ್ಲಿರತಕ್ಕ ಜನರಿಗೆ ತೊಂದರೆಯಾಗುತ್ತಿದೆ. ಇದಕ್ಕೆ ಏನಾದರೂ ಮಾಡಬೇಕು. ಈಗಲಾದರೂ ಮಂತ್ರಿಗಳು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಇಲ್ಲಿ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಿಕೊಡಲಿಕ್ಕೆ ಮನಸ್ಸು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮುಖ್ಯಮಂತ್ರಿಗಳ ಪರವಾಗಿ):– ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಸರಿಯಾಗಿ ಹೇಳಿದ್ದಾರೆ. ಅವರು ಕೊಟ್ಟಿದ್ದಂಥ ಪಿಟಿಷನ್ ಜಿಲ್ಲಾ ಪರಿಷತ್ತಿಗೆ ಹೋಗಿದೆ. ಜಿಲ್ಲಾಪರಿಷತ್ತಿನವರು ಇದುವರೆಗೆ ಶಿಫಾರಸ್ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿಲ್ಲ. ಈ ಸಾರಿ 1993-94 ನಲ್ಲಿ ಜಿಲ್ಲಾಪರಿಷತ್ತಿನವರು ಶಿಫಾರಸ್ ಮಾಡಿ ಕಳುಹಿಸಿದರೆ ಅದನ್ನು ಸ್ಥಾಪನೆ ಮಾಡಲಿಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ:– ಮೊದಲು ಅಲ್ಲಿಗೆ ಸಂಚಾರಿ ವೈದ್ಯ ಶಾಲೆಯನ್ನು ಕಳುಹಿಸುತ್ತಿದ್ದರು. ಎರಡು ವರ್ಷಗಳಿಂದ ಅದನ್ನೂ ನಿಲ್ಲಿಸಿಬಿಟ್ಟಿದ್ದಾರೆ. ಇವರು 90ನೇ ಇಸವಿಯಲ್ಲಿ ಜಿಲ್ಲಾಪರಿಷತ್ತಿಗೆ ಕಳುಹಿಸಿದ್ದಾರೆ, ಈಗ ನಾವು 93ನೇ ಇಸವಿಯಲ್ಲಿ ಇದ್ದೇವೆ. ಈಗ ಜಿಲ್ಲಾಪರಿಷತ್ತು ಆಡಳಿತ ಅಧಿಕಾರಿಗಳ ಕೈಯಲ್ಲೇ ಇದೆ. ದಯಮಾಡಿ ಈ ಸಾಲಿನಲ್ಲಿ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಿಕೊಡುತ್ತೇನೆಂದು ಆಶ್ವಾಸನೆ ಕೊಡಬೇಕು.

ಶ್ರೀ ಬ್ಲೆಸಿಯಸ್ ಎಂ. ಡಿಸೋಜ:– ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವನಂಜಪ್ಪನವರು ಬಹಳಷ್ಟು ಪ್ರಭಾವಿ ಶಾಸಕರಾಗಿದ್ದಾರೆ. ಅವರು ಅಲ್ಲಿನ ಜಿಲ್ಲಾಪರಿಷತ್ತಿನ ಸೂಚನೆಯನ್ನು ನಮ್ಮ ಸರ್ಕಾರಕ್ಕೆ ಕಳುಹಿಸಿದರೆ ನಾವು ಇದನ್ನು ನಾವು ಮಂಜೂರು ಮಾಡುತ್ತೇವೆ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೆ, ವೃತ್ತಿಪರ ಶಿಕ್ಷಣದ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಏನು ತೀರ್ಮಾನವಾಗಿದೆಯೋ ಅದರ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆಂದು ಹೇಳಿದ್ದೆ....

ಅಧ್ಯಕ್ಷರು:– ಪ್ರಶ್ನೋತ್ತರ ಕಾಲ ಇನ್ನೂ ಮುಗಿದಿಲ್ಲ.

ಮಂಗಳೂರು ತಾಲ್ಲೂಕು ಕೆಂಜಾರ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ತೊಂದರೆ

1020: ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್):–

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ತಾಲ್ಲೂಕು ಕೆಂಜಾಶನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ನ ವತಿಯಿಂದ ಪ್ರೌಢಶಾಲೆಯನ್ನು ಆರಂಭಿಸಿ ಎಷ್ಟು ವರ್ಷಗಳಾದವು;

ಆ) ಈ ಶಾಲೆಯಲ್ಲಿ ಪ್ರಸ್ತುತವಿರುವ ಅಧ್ಯಾಪಕರು, ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಇ) ಈ ಶಾಲೆಗೆ ಕಟ್ಟಡ ನಿರ್ಮಾಣಕ್ಕಾಗಿ ಜಿಲ್ಲಾ ಪರಿಷತ್ ಕೈಗೊಂಡ ಕ್ರಮವೇನು;